# ಭರತೇಶ ವೈಭವ : ಭರತ ಮತ್ತು ಬಾಹುಬಲಿ ಪಾತ್ರಗಳ ಅನನ್ಯತೆ

ಡಾ.ಹೊಂಬಯ್ಯ ಹೊನ್ನಲಗೆರೆ,

ಮುಖ್ಯಸ್ಥರು, ಕನ್ನಡ ವಿಭಾಗ,

ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,

ಬೇಡಕಿಹಾಳ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

೯೯೬೪೦೧೮೧೧೨

ಕನ್ನಡ ಸಾಹಿತ್ಯದಲ್ಲಿ ರತ್ನಾಕರವರ್ಣಿ ಸಮನ್ವಯ ಕವಿ. ಜೈನಪರಂಪರೆಯ ಅರಿವಿನೊಂದಿಗೆ ವೈದಿಕ ಪರಂಪರಯೆ ಕೊಂಡಿಯನ್ನು ಬೆಸೆದ ಜೈನ ಕವಿ. ೧೬ನೇ ಶತಮಾನದ ಕವಿಯಾದ ರತ್ನಾಕರವರ್ಣಿಯ ಕಾಲಕ್ಕೆ ಜೈನಧರ್ಮವು ತನ್ನ ಅಸ್ತಿತ್ವನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿ ಇತ್ತು. ಇಂತಹ ಸಂದರ್ಭದಲ್ಲಿ ಜೈನಧರ್ಮವು ತನ್ನ ಅಸ್ತಿತ್ವವನ್ನು ಮತ್ತೇ ಕಂಡುಕೊಳ್ಳಬೇಕಾದ ಸಮಯದಲ್ಲಿ ಕವಿ ಭರತೇಶ ವೈಭವವನ್ನು ರಚಿಸಿದ್ದಾನೆ. ಪಂಪನು ಲೌಕಿಕ ಮತ್ತು ಅಲೌಕಿಕ(ಆಗಮಿಕ) ಎಂಬ ಕಾವ್ಯಗಳನ್ನು ಬರೆದನು. ಇದರೊಂದಿಗೆ ಪಂಪ ಚಂಪೂ ಕಾವ್ಯ ಪ್ರಕಾರಕ್ಕೆ, ಹರಿಹರ ರಗಳೆಗೆ, ರಾಘವಾಂಕ ಷಟ್ಪದಿಗೆ ಮುಖ್ಯವಾದಂತೆ ರತ್ನಾಕರವರ್ಣಿಯು ಸಾಂಗತ್ಯಕ್ಕೆ ಪ್ರಮುಖನಾಗಿದ್ದಾನೆ. ಈ ಮೇಲಿನ ಎಲ್ಲಾ ಕವಿಗಳು ಭಿನ್ನ ಭಿನ್ನ ನೆಲೆಯಲ್ಲಿ ತಮ್ಮ ತಮ್ಮ ಕಾವ್ಯವನ್ನು ರಚಿಸಿದ್ದಾರೆ. ಜೀನಸೇನರ ಪೂರ್ವಪುರಾಣ, ಪಂಪನ ಆದಿಪುರಾಣ, ಚಾವುಂಡರಾಯನ ಚಾವುಂಡರಾಯ ಪುರಾಣ, ಮೊದಲಾದ ಗ್ರಂಥಗಳಲ್ಲಿ ಮೊದಲನೆಯ ತೀರ್ಥಂಕರನಾದ ಪುರುದೇವನ ಮಕ್ಕಳಾದ ಭರತ ಚಕ್ರವರ್ತಿ ಮತ್ತು ಬಾಹುಬಲಿಯರ ಪ್ರಸಂಗಗಳನ್ನು ಕುರಿತು ಕಾವ್ಯ ರಚಿಸಿದ್ದಾರೆ.

ರತ್ನಾಕರವರ್ಣಿ ೧೬ನೇ ಶತಮಾನದ ಅದ್ವಿತೀಯ ಕವಿ. ಇವನ ಕಾಲಘಟ್ಟಕ್ಕೆ ಜೈನಧರ್ಮದ ಪ್ರಭಾವ ಕಡಿಮೆಯಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಜೈನಧರ್ಮವು ಮತ್ತೇ ತನ್ನ ಸ್ಥಾನವನ್ನು ಪಡೆದುಕೊಳ್ಳಲು ಅಷ್ಟೇನು ಪ್ರಭಾವವಿರಲಿಲ್ಲ. ಆಕಾಲಕ್ಕೆ ವೀರಶೈವಧರ್ಮ ಹೆಚ್ಚು ಪ್ರಚಾರದಲ್ಲಿ ಇತ್ತು. ಇಂತಹ ಸಂದರ್ಭದಲ್ಲಿ ಕರ್ನಾಟಕದ ಕರವಾಳಿ ಭಾಗದಲ್ಲಿ ಮಾತ್ರ ಜೈನಧರ್ಮವು ೧೬ನೇ ಶತಮಾನದಲ್ಲಿ ಸ್ವಲ್ಪ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು ಎಂದರೇ ಅದು ತಪ್ಪಾಗಲಾರದು. ಏಕೆಂದರೆ ವಿಜಯನಗರದ ಮಾಂಡಲಿಕರಾದ ಕಾರ್ಕಳದ ಭೈರರಸರು, ಗೇರುಸೊಪ್ಪೆ, ಹಾಡುವಳ್ಳಿ ಸಾಮಂತರು, ಕಳಸ ಬಂಗಾಡಿಯ ಬಂಗರು, ಏಣೂರಿನ ಅಜಿಲರು, ಮೂಡಬಿದ್ರೆಯ ಚೌಟರು ಇವರೆಲ್ಲರೂ ಸೇರಿ ಜೈನಧರ್ಮ ನಾಶವಾಗದಂತೆ ಅಲ್ಲಲ್ಲಿ ರಕ್ಷಣೆ ನೀಡಿದ ಮಹಾ

ಪೋಷಕರು. ರತ್ನಾಕರವರ್ಣಿಯು ಭೈರರಸರ ಅಸ್ಥಾನದ ಕವಿಯಾಗಿದ್ದನು. ಇಂತಹ ಸಂದರ್ಭದಲ್ಲಿ ಕರಾವಳಿಯ ಸಣ್ಣಪುಟ್ಟ ರಾಜರು ಜೈನ ಕವಿಗಳಿಗೆ ಆಶ್ರಯ ನೀಡಿದ್ದರು. ರತ್ನಾಕರವರ್ಣಿ, ಕಲ್ಯಾಣಕೀರ್ತಿಗಳಂತಹ ಕವಿಗಳಲ್ಲದೆ ಕಾರ್ಕಳದಲ್ಲಿ ಗೊಮ್ಮಟನ ಪ್ರತಿಷ್ಠೆ, ಮೂಡಬಿದ್ರೆಯ ಬಸದಿ, ಭಟ್ಕಳದ ಬಸದಿ ಮುಂತಾದವುಗಳ ಪ್ರಭಾವದಿಂದ ಕರವಾಳಿಯಲ್ಲಿ ಜೈನಧರ್ಮದ ತತ್ವ ಸಿದ್ಧಾಂತಗಳು ಜೀವಂತವಾಗಿ ಬೇರುರಿದ್ದವು. ಇಂತಹ ಸಂದರ್ಭದಲ್ಲಿ ರತ್ನಾಕರವರ್ಣಿ 'ಭರತೇಶ ವೈಭವ' ಕಾವ್ಯವನ್ನು ರಚನೆ ಮಾಡಿದನು.

ಕವಿ ರತ್ನಾಕರವರ್ಣಿಯು ತನ್ನ ಸಾಂಗತ್ಯ ಕೃತಿ ಭರತೇಶ ವೈಭವದಲ್ಲಿ 'ಭರತನನ್ನು ಕಥಾನಾಯಕನನ್ನಾಗಿ' ಮಾಡಿಕೊಂಡಿದ್ದಾನೆ. ಇಲ್ಲಿ ಭರತನಷ್ಟೇ ಬಾಹುಬಲಿಯು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದಾನೆ. ಇದಕ್ಕೆ ಪೂರಕವೆಂಬಂತೆ ಭರತೇಶವೈಭವದಲ್ಲಿ ಆದರ್ಶ ಜೀವನದ ಲೌಕಿಕ ಮತ್ತು ಆಲೌಕಿಕಗಳನ್ನು ಸಮನ್ವಗೊಳಿಸಿದ್ದಾನೆ. ಈ ಕಾವ್ಯ ಯೋಗ-ಭೋಗಗಳ ಸಂಮಿಲನವಾಗಿದೆ. ಈ ಕಾವ್ಯ ಎಂಬತ್ತು ನಾಲ್ಕು ಸಂಧಿಗಳಲ್ಲಿ ಹತ್ತು ಸಾವಿರ ಸಾಂಗತ್ಯ ಪದ್ಯಗಳನ್ನು ಹೊಂದಿದೆ. ಜೈನ ಧರ್ಮದ ಪಂಚಾಣುವ್ರತಗಳಂತೆ ರತ್ನಾಕರವರ್ಣಿಯು ಭರತೇಶ ವೈಭವವನ್ನು ಪ್ರಮುಖ ಐದು ಭಾಗಗಳಲ್ಲಿ ಕಟ್ಟಿದ್ದಾನೆ. ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಮೋಕ್ಷವಿಜಯ, ಅರ್ಕಕೀರ್ತಿವಿಜಯಗಳಲ್ಲಿ ಭರತನ ನೆಲೆ-ಹಿನ್ನೆಲೆಯಲ್ಲಿ ಸುಂದರವಾಗಿ ಹೆಣೆದಿದ್ದಾನೆ. ರತ್ನಾಕರವರ್ಣಿ ತನ್ನ ಭರತೇಶವೈಭವ ಕಾವ್ಯವನ್ನು ರಚಿಸುವ ಸಂದರ್ಭದಲ್ಲಿ 'ಕಬ್ಬಿಗರೋದುಗಬ್ಬವ ಹಾಡುಗಬ್ಬವ ಕಬ್ಬದೊಳೊರೆವರಿವೆರಡು ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ ಕಬ್ಬೆ ಹೇಳಲೇ ಸರಸ್ವತಿ'೧ ಎಂದು ಹೇಳಿಕೊಂಡಿದ್ದಾನೆ. ಹಾಗಾಗಿ ಈ ಕಾವ್ಯವನ್ನು ಮೂಡಬಿದರಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದಿಗೂ ಹಾಡುಗಬ್ಬವಾಗಿ ಪಠಣ ಮಾಡುವುದು ತಿಳಿದು ಬರುತ್ತದೆ.

ಈ ಭರತೇಶ ವೈಭವದ ಕಾವ್ಯದ ನಾಯಕ ಭರತೇಶ. ಭರತೇಶನಿಂದ ಭಾರತವಾಯಿತೆಂದು ಹಲವು ವಿದ್ವಾಂಸರು ಹೇಳುತ್ತಾರೆ. ಮೊದಲನೆಯ ತೀರ್ಥಂಕರನಾದ ಪುರುದೇವ (ಪುರು ಪರಮೇಶ್ವರ)ನ ನೂರಾರು ಮಕ್ಕಳಲ್ಲಿ ಹಿರಿಯನಾದವನು ಭರತೇಶ. ಪುರುದೇವನಿಗೆ ಹಲವು ಗಂಡುಮಕ್ಕಳಲ್ಲಿ ಬಾಹುಬಲಿಯು ಸಹ ಪ್ರಮುಖನಾಗಿದ್ದಾನೆ. ಏಕೆಂದರೆ ರತ್ನಾಕರವರ್ಣಿಯು ಪರಂಪರೆಯನ್ನು ಅನುಸರಿಸಿಕೊಂಡು ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ಪಂಪ ಮತ್ತು ಚಾವುಂಡರಾಯ ಕಾವ್ಯದಲ್ಲಿ ಪ್ರಮುಖವಾಗಿ ಬರುವ ಬಾಹುಬಲಿಯನ್ನು ನಗೌಣ ಮಾಡದೇ ಭರತನಷ್ಟೇ ಭೋಗದಲ್ಲಿಯು ಸಮನ್ವಯಗೊಳಿಸಿದ್ದಾನೆ. ಹಾಗಾಗಿ ಈ ಕಾವ್ಯದಲ್ಲಿ ಭರತ ಮತ್ತು ಬಾಹುಬಲಿಯ ಪ್ರಸಂಗವು ಉಳಿದ ಎರಡು ಕಾವ್ಯಗಳಿಗಿಂತ ಭಿನ್ನತೆ ಮತ್ತು ಅನನ್ಯತೆಯಿಂದ ಕೂಡಿದೆ. ಈ ಕಾವ್ಯದಲ್ಲಿ

ಭರತನೇ ಚಕ್ರಿ. ಪಂಪಾದಿ ಕವಿಗಳು ಭರತನಿಗಿಂತ ಬಾಹುಬಲಿಗೆ ಆದ್ಯ ಸ್ಥಾನವನ್ನು ಕಲ್ಪಿಸಿದ್ದಾರೆ. ತ.ಸು ಶಾಮರಾಯರು ಹೇಳುವಂತೆ, "ಭರತನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ವಿಸ್ತಾರವಾಗಿ ಪ್ರತಿಪಾದಿಸಿದ ಕೀರ್ತಿಯು ರತ್ನಾಕರವರ್ಣಿಗೆ ಸಲ್ಲುತ್ತದೆ. ಯಾವ ಮೊದಲಿನ ಗ್ರಂಥಗಳಲ್ಲಿಯೂ ಕಾಣದೊರೆಯದ ಬಗೆಯಲ್ಲಿ ಜೈನ ಸಮೂಹಕ್ಕೆ ಬಹುಶಃ ಬಾಧೆ ತರದಂತೆ ಭರತೇಶನ ಭವ್ಯಮೂರ್ತಿ ಕಲ್ಪನೆ ಆದರ್ಶ ಜೀವನದ ಸಮನ್ವಯ ಸಾಧನೆ ಇವು ಸಾಕಾರ ಸ್ವಪ್ನದಂತೆ ಭರತೇಶ ವೈಭವ ಕಾವ್ಯದಲ್ಲಿ ಚಿತ್ರಿತವಾಗಿದೆ"೧.

ಈ ಕಾವ್ಯದಲ್ಲಿ ಭರತನ ಅನನ್ಯತೆಯನ್ನು ಹುಡುಕುತ್ತಾ ಹೋದರೆ ಭಿನ್ನವಾದ ಚಿಂತನೆಗಳು ಓದುಗರಿಗೆ ದೊರೆಯುತ್ತದೆ. ಭರತನು ಓದುಗರಿಗೆ ಈ ಹಲವು ಬಗೆಗಳಲ್ಲಿ ದೊರೆಯುತ್ತಾನೆ. ಭರತ ಒಬ್ಬ ಆದರ್ಶರಾಜನಾಗಿದ್ದಾನೆ. ಭರತ ಒಬ್ಬ ಆದರ್ಶ ಮಗನಾಗಿ ಮತ್ತು ಬಂಧುವಾಗಿದ್ದಾನೆ. ಭರತ ಒಬ್ಬ ಆದರ್ಶ ಪತಿಯಾಗಿದ್ದಾನೆ. ಇದರೊಂದಿಗೆ ಸಂಸಾರದ ವಿವಿಧ ಮಾನವೀಯ ಬಂಧಕ್ಕೆ ಆದರ್ಶ ಪ್ರಾಯನಾಗಿದ್ದಾನೆ. ಭರತ ಒಬ್ಬ ಆದರ್ಶ ಧರ್ಮಿಯನಾಗಿದ್ದಾನೆ. ಭರತ ಒಬ್ಬ ಕೊಡುಗೈ ದಾನಿಯಾಗಿ ಕಾವ್ಯದಲ್ಲಿ ಕಂಡು ಬರುತ್ತಾನೆ. ಭರತ ಒಬ್ಬ ಸಂಗೀತ ಪ್ರೀಯನು ಮತ್ತು ಹಾಸ್ಯ ಪ್ರಜ್ಞೆಯನ್ನು ಹೊಂದಿರುವ ಸಂಗೀತ ಆರಾಧಕನು ಆಗಿದ್ದಾನೆ. ಭರತ ಒಬ್ಬ ಶ್ರೇಷ್ಠ ಜೀನ ಭಕ್ತನಾಗಿದ್ದಾನೆ. ಭರತ ಒಬ್ಬ ಶ್ರೇಷ್ಠ ಭೋಗಿಯಾಗಿ, ತ್ಯಾಗಿಯಾಗಿ ಯೋಗಿಯಾಗಿ ಕೈವಲ್ಯವನ್ನು ಹೊಂದುವ ಜೈನಮುನಿಯಾಗಿ ಕಂಡು ಬರುತ್ತದೆ. ಹೀಗೆ ಒಬ್ಬ ಶ್ರೇಷ್ಠನಾದ ರಾಜ ಹೇಗೆ ಅನನ್ಯತೆಯ ಸ್ವರೂಪಗಳನ್ನು ಪಡೆದುಕೊಳ್ಳಬಹುದು ಎಂಬುವುದನ್ನು ಭರತೇಶವೈಭದದಲ್ಲಿ ರತ್ನಾಕರವರ್ಣಿ ಕಟ್ಟಿಕೊಟ್ಟಿದ್ದಾನೆ.

ಭರತೇಶವೈಭವವು ಆಸ್ಥಾನಸಂಧಿಯೊಂದಿಗೆ ಪ್ರಾರಂಭವಾಗುತ್ತದೆ. ಇಲ್ಲಿ ಕವಿ ಓದುಗರಲ್ಲಿ ಮತ್ತು ಹಾಡುಗಬ್ಬವನ್ನು ಕೇಳುವವರಲ್ಲಿ ಕೆಲವು ಮಾತುಗಳನ್ನು ಹೇಳುವುದರ ಮೂಲಕ ಈ ಕಾವ್ಯದ ಔಚಿತ್ಯವನ್ನು ಮೆರದಿದ್ದಾನೆ. ಇಲ್ಲಿ ಶೃಂಗಾರ, ತ್ಯಾಗ, ಭೋಗದ ಸನ್ನಿವೇಶಗಳನ್ನು ಚಿತ್ರಸುವುದರಿಂದ ಭರತ ಚಕ್ರವರ್ತಿಯ ಅನನ್ಯತೆಯನ್ನು ಮೆರೆದಿದ್ದಾನೆ. ಪುರುದೇವನ ಹಿರಿಯ ಮಗನಾದ ಭರತನು ಸ್ತ್ರೀ ಸಮೂಹಕ್ಕೆ ರಾಜರೂಪದ ಮದನ, ಚದುರ ಶಿರೋಮಣಿ, ಕ್ಷಣಮಾತ್ರದಲ್ಲಿ ಮೋಕ್ಷವನ್ನು ಸಂಪಾದಿಸುವ ಸಮರ್ಥ ಜಿನನಾಗಿಯೂ ಸಹ ಓದುಗರಿಗೆ ತೆರೆದುಕೊಳ್ಳುತ್ತಾನೆ. ಭರತನು ಹೆಣ್ಣುಗಳಿಗೆ ಮನ್ಮಥನಾದವನು. ಇವನು ಪುರುಷ ಸೌಂದರ್ಯವನ್ನು ಹೊಂದಿದ್ದ ಇವನಿಗೆ ಮಾರು ಹೋಗದ ಹೆಂಗಳೆಯರೇ ಇಲ್ಲ ಎಂದು ಭಾಸವಾಗುತ್ತದೆ. ಏಕೆಂದರೆ ಇವನಿಗೆ ೯೬೦೦೦ ಮಡದಿಯರು ಜೊತೆಯಲ್ಲಿ ಇದ್ದರು. ಒಬ್ಬರೂ ಸಹ ಸವತಿ ಮತ್ಸರ ಇಲ್ಲದೆ ಆನಂದ ಸಂತೋಷದಿಂದ ಜೀವನ

ಸಾಗಿಸುತ್ತಿದ್ದರು. "ಹೆಂಗಳ ರೂಪು ಗಂಡರಿಗೆ ಗಂಡರ ರೂಪು ಹೆಂಗಳ ಸೋಲಿಪುದೆಂಬ ಪಾಂಗಲ್ಲವವನ ಚೆಲ್ವಿಕೆ ಗಂಡು ಪೆಣ್ಗಳ ಕಂಗಳ ಸೆರೆವಿಡಿದಿಹುದು"೩ ಎಂದು ರತ್ನಾಕರನು ವರ್ಣಿಸಿದ್ದಾನೆ.

ಭರತೇಶನ ಭೋಗ ಜೀವನವು ಕೌಟುಂಬಿಕ ಚೌಕಟ್ಟಿನೊಳಗೆ ನಡೆಯುತ್ತದೆ. ಇಲ್ಲಿ ಪತಿಧರ್ಮ ಮತ್ತು ಸತಿಧರ್ಮವು ನೀತಿ ಸಂಹಿತೆಯಾಗಿ ಕಂಡು ಬರುತ್ತದೆ. ಪತಿಯನ್ನು ಪಾಲಿಸುವ ಧರ್ಮ ಸತೀಯದಾದರೆ, ಸತಿಯನ್ನು ಕಾಪಾಡುವ ಜವಾಬ್ದಾರಿಯು ಪತಿಯದಾಗಿರುತ್ತದೆ ಎಂಬ ಅಂಶವನ್ನು ಈ ಕಾವ್ಯ ಸಂದರ್ಭದಲ್ಲಿ ಪರಿಗಣಿಸಬಹುದು. ಇದಕ್ಕೆ ಸಂಬಂಧಿಸಿದ ಉದಾಹರಣೆಯನ್ನು ಗಮನಿಸುವುದಾದರೆ, ಸ್ವಾಮಿಗಳು ಭರತನ ಆಸ್ಥಾನಕ್ಕೆ ಬಂದಾಗ ಅವರಿಗೆ ಆರೋಗಣೆಯ ವ್ಯವಸ್ಥೆಯನ್ನು ಮಾಡುತ್ತಾರೆ. ಸ್ವಾಮಿಜಿಗಳು ಬಂದು ಆಹಾರವನ್ನು ಸವಿದ ನಂತರ ಎಲ್ಲಾರು ಸಂತೋಷವನ್ನು ಅಭಿವ್ಯಕ್ತಪಡಿಸುತ್ತಾರೆ. ನಂತರ ಭರತೇಶನ ಹೆಂಡತಿಯರು ಭರತನನ್ನು ಭೋಜನಕ್ಕೆ ಕರೆಯುವ ಸಂದರ್ಭವನ್ನು ಬಹಳ ಸುಂದರವಾಗಿ ರತ್ನಾಕರವರ್ಣಿ ಹೆಣೆದಿದ್ದಾರೆ.

> 'ಸ್ವಾಮಿಗಾರೋಗಣೆಯಾದ ಬಳಿಕಲುಂಬ
> ನೇಮವುಂಟೆಮಗದರಿಂದ
> ಸ್ವಾಮಿಭೋಜನಕೆ ಚಿತ್ತೈಸಬೇಕೆಂದೆಲ್ಲ
> ಕೈಮುಗಿದರು ಭಕ್ತಿಯಿಂದ'೪

ಈ ಸಂದರ್ಭದಲ್ಲಿ ದಂಪತಿಗಳು ಮುನಿಗಳನ್ನು ಬಿಳ್ಕೊಟ್ಟು ಪತಿಯನ್ನು ಭೋಜನಕ್ಕೆ ಬರಬೇಕೆಂದು ಭಕ್ತಿಯಿಂದ ಕೈಮುಗಿಯುತ್ತಾರೆ. ಆದರೆ ಭರತೇಶನ ಮನದಲ್ಲಿ ಎಲ್ಲಾ ರಾಣಿಯರು ಸಹ ಮುನಿಗಳು ಸೇವಿಸಿ ಬಿಟ್ಟ ಶೇಷಾನ್ನವನ್ನು ನೀಡಬೇಕು. ಆ ಮೂಲಕ ಜಿನನ ಭಕ್ತಿ ಎಲ್ಲಾ ರಾಣಿಯರಿಗೂ ದೊರೆಯಬೇಕೆಂಬ ಹಂಬಲವನ್ನು ಅಭಿವ್ಯಕ್ತಿಸುತ್ತಾನೆ. ಅಂದರೆ ಸತಿ-ಪತಿ ಒಂದಾದ ಭಕ್ತಿ ಶಿವಂಗೆ ಅರ್ಪಿತವಾಯಿತು ಎಂಬಂತೆ, ಇವರು ಸತಿ ಪತಿಯ ಭಕ್ತಿಯು ಬಹಳ ಶ್ರೇಷ್ಠವಾಗಿ ಕಾವ್ಯದಲ್ಲಿ ಕಂಡು ಬರುತ್ತದೆ. ಹಾಗಾಗಿ ರಾಜನಾದ ಭರತೇಶನು 'ಎಲ್ಲರು ಒಂದಾಗಿ ಪಂತಿಯೊಳು ಉಣಬೇಕು ಬನ್ನಿರಿ' ಎಂದು ಕರೆಯುತ್ತಾನೆ. ಆಗ ರಾಣಿಯರ ಮನದಲ್ಲಿ ಸಂತೋಷ ಉಂಟಾಗಿ ಸಂಕೋಚದಿಂದ ಒಬ್ಬರಿಗೊಬ್ಬರು ತಮ್ಮ ತಮ್ಮ ಮುಖಗಳನ್ನು ನೋಡಿಕೊಂಡು ನಾಚಿಕೊಳ್ಳುತ್ತಾರೆ. ಅಂತಯೇ ಗಂಡನಾದ ಭರತೇಶನೊಂದಿಗೆ ಊಟಮಾಡಲು ಹಿಂದು ಮುಂದು ನೋಡುತ್ತಾರೆ.

"ಒಬ್ಬರ ಮೊಗವನೊಬ್ಬರು ನೋಡಿ ತಮ್ಮೊಳು ಸಿಬ್ಬದಿಗೊಂಡು ಚಿಂತಿಪರು ಒಬ್ಬರ ಪರಿಣತಿಯೊಬ್ಬರಿಗಿಲ್ಲ ದೊಬ್ಬೊಬ್ಬರಿಂತಾಡಿದರಾಗ" ಈ ಸಂದರ್ಭವನ್ನು ಅವಲೋಕನ ಮಾಡಿದ ಭರತೇಶನು 'ಬರಲ್ಲೊಲ್ಲದೆಮ್ಮನೇತಕ

ನೋಯಿಸುವಿರಿ ನಿಷ್ಕರುಣೆಯರಿರಾ ಬನ್ನಿ' ಎಂದು ಬಹಳ ಪ್ರೀತಿಯಿಂದ ಕರೆಯುತ್ತಾನೆ. ಇವನ ಮಾತಿಗೆ ಎದರು ಮಾತನಾಡದೆ ಪತಿರಾಯನೊಂದಿಗೆ ಊಟಕ್ಕೆ ಬರುತ್ತಾರೆ. ಇಲ್ಲಿ ಯಾವುದೇ ಹಿರಿಯದು ಕಿರಿಯದು ಎಂಬ ಯಾವ ಸವತಿ ಮತ್ಸರವಿಲ್ಲದೆ ಬಹಳ ಸಂತೋಷದಿಂದ ಭರತನೊಟ್ಟಿಗೆ ಎಲ್ಲಾ ರಾಣಿಯರು ಕಾಲಕಳೆಯುತ್ತಾರೆ. ಇದರೊಂದಿಗೆ ಭರತೇಶನು ಯುದ್ಧಕ್ಕೆ ಹೊರಡುವಾಗಲೂ ಸಹ ಚಕ್ರರತ್ನದೊಂದಿಗೆ ತನ್ನ ಎಲ್ಲಾ ಮಡದಿಯರನ್ನು ಜೊತೆಯಲ್ಲೇ ಕರೆದುಕೊಂಡು ಹೋಗುತ್ತಾನೆ. ಈ ಬಗೆಯ ವಿಶೇಷವನ್ನು ಮತ್ತೇ ಯಾವ ಕಾವ್ಯದಲ್ಲೂ ಕಾಣಲು ಸಾಧ್ಯವಾಗುವುದಿಲ್ಲ.

ಸಂಸಾರದಲ್ಲೇ ಮೋಕ್ಷವನ್ನು ಪಡೆದವನು ಭರತ. ಈತ ತನ್ನ ೯೬೦೦೦ ಮಡದಿಯರೊಂದಿಗೆ ಸುಂದರವಾದ ಜೀವನವನ್ನು ನಡೆಸಿದ್ದಾನೆ. ಅಂದರೆ ಸಂಸಾರದಲ್ಲೇ ಇದ್ದರೂ ಸಹ ಸಂಸಾರವನ್ನೇ ಅಂಟಿಕೊಳ್ಳದೇ ಸಾಧನೆ ಮಾಡಿದ ಸಾಧಕನಾಗಿದ್ದಾನೆ. ರಾಜನಾದವನಿಗೆ ಯಾವ ಬಗೆಯಲ್ಲಿ ಎಲ್ಲಾ ಸನ್ನಿವೇಶಗಳನ್ನು ಎದುರಿಸಬೇಕು. ಯಾವುದಕ್ಕೆ ಎಲ್ಲಾ ಬಗೆಯ ಪ್ರಾಮುಖ್ಯತೆಯನ್ನು ನೀಡಬೇಕು ಎಂಬ ಆಲೋಚನೆಯನ್ನು ಚನ್ನಾಗಿ ರತ್ನಾಕರವರ್ಣಿ ಭರತೇಶನ ಕೈಯಲ್ಲಿ ರಾಜನೀತಿ ತಂತ್ರವನ್ನು ಹೆಣೆದಿದ್ದಾನೆ ಮತ್ತು ನಡೆಸಿಕೊಂಡಿದ್ದಾನೆ. ಇವನ ವ್ಯಕ್ತಿತ್ವವನ್ನು ಕುರಿತಂತೆ ಕವಿಯಾದ 'ದಿವಿಜ ಕಲಾಧರ'ನು ಹೀಗೆ ಹೇಳುತ್ತಾನೆ.

'ತನು ಜಿನಗೃಹನೆಂದು ಮನಸಿಂಹಪೀಠವೆ
ದಾನುಪರಮಾತ್ಮನೆ ಜಿನನೆಂದು
ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ
ಈನನಾಥ ತೋರವನೊಳಗೆ'೫

ಎಂದು ಹಾಡಿ ಹೊಗಳಿದ್ದಾನೆ. ಭರತೇಶನು ರಾಜನಂತೆ ಜೀನಧರ್ಮ ಪ್ರತಿಪಾಧಕನು ಸಹ ಆಗಿದ್ದಾನೆ. ದೇಹವನ್ನು ದೇಗುಲವನ್ನಾಗಿ ಮಾಡಿಕೊಂಡು, ಮನಸ್ಸನೆ ಸಿಂಹಾಸನ ಪೀಠವನ್ನಾಗಿ ಮಾಡಿಕೊಂಡು, ಅನುಪನಾದ ಜಿನನನ್ನು ದೇವರೆಂದು ಪರಿಭಾವಿಸಿದವನ್ನು ನಮ್ಮ ರಾಜ ಭರತಚಕ್ರವರ್ತಿ ಎಂದು ಬಣ್ಣಿಸುತ್ತಾನೆ. ಹಾಗಾಗಿ ಭರತನು ಒಳ್ಳೆಯ ಪತಿಯಾಗಿ ಮತ್ತು ಜೈನಧರ್ಮದ ಪ್ರತಿಪಾದಕನಾಗಿಯು ಸಹ ಭರತೇಶವೈಭವದಲ್ಲಿ ಕಂಡು ಬರುತ್ತಾನೆ.

ಭರತನು ಒಬ್ಬ ಮಾತ್ರ ಸಂವೇದನೆಯ ಒಳಗೊಂಡಿರುವ ರಾಜ. ಇದರೊಂದಿಗೆ ಒಬ್ಬ ಒಳ್ಳೆಯ ಮಗನಾಗಿಯು ಸಹ ತನ್ನ ಕಾರ್ಯವನ್ನು ಮರೆತಿಲ್ಲ. ಈ ಜಗತ್ತಿನಲ್ಲಿ ತಾಯಿಯ ಋಣವು ಬಲು ದೊಡ್ಡದು. ಎಷ್ಟೇ ಜನ್ಮ ಎತ್ತಿದ್ದರು ಸಹ ತಾಯಿಯ ಋಣ ಮತ್ತು ಅನ್ನದ ಋಣವನ್ನು ತೀರಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ತಾಯಿಯಾದ

ಯಶಸ್ವತಿ ದೇವಿಯ ಮೇಲೆ ಭರತೇಶನಿಗೆ ಎಲ್ಲಿಲ್ಲದ ಪ್ರೀತಿ. ತಾಯಿಯ ಮಾತನ್ನು ಭರತನು ಎಲ್ಲಿಯೂ ಮೀರುವುದಿಲ್ಲ. ಒಮ್ಮೆ ಹಬ್ಬದ ಮರುದಿನ ಅಮ್ಮನೊಂದಿಗೆ ಊಟಮಾಡಬೇಕೆಂದು ನಿರ್ಧರಿಸುತ್ತಾನೆ. ತಾಯಿಗೆ ಕೈತುತ್ತು ನೀಡಿ ಊಟ ಮಾಡಿಸುತ್ತಾನೆ. ಅಂತಯೇ ತಾಯಿಯನ್ನು ತೂಗುಮಂಚದಲ್ಲಿ ಕುಳ್ಳಿರಿಸಿ ಹೂವಿನ ದಾರದಿಂದ ತಾಯಿಯನ್ನು ನೆಲದ ಮೇಲೆ ಕುಳಿತುಕೊಂಡು ತೂಗುತ್ತಾನೆ. ಈ ಬಗೆಯ ತಾಯಿ ಪ್ರೀತಿಯನ್ನು ಕನ್ನಡ ಸಾಹಿತ್ಯದ ಯಾವ ಕಾವ್ಯದಲ್ಲೂ ನಾವು ಕಾಣಲಿಕ್ಕೆ ಸಿಗುವುದಿಲ್ಲ. ಇವನ ತಾಯಿ ಪ್ರೀತಿ ಇಂದಿನ ವರ್ತಮಾನದಲ್ಲಿ ಪ್ರತಿಯೊಬ್ಬರಿಗೂ ಮಾದರಿ ಎಂದು ಹೇಳಬಹುದು. “ತೂಗು ಮಂಜದ ಒರಗಿದ ತಾಯ ಭರತೇಶ ತೂಗಿದನಂದು ತೊಟ್ಟಿಲೊಳು ರಾಗದೊಳಿಟ್ಟಕೆ ತೂಗಿದ ಸಾಲವ ತೂಗಿ ತಿದ್ದುವನ್ನು ಎಂಬಂತೆ... ಜೋ..ಜೋ..” ತಾಯಿಯನ್ನು ಮಗುವಿನ ರೀತಿಯಲ್ಲಿ ತೂಗುತ್ತಾನೆ. ಅಂದರೆ ತಾನು ಬಾಲ್ಯದಲ್ಲಿ ಇದ್ದಾಗ ತಾಯಿ ತೂಗಿದ ಸಾಲವನ್ನು ತೀರಿಸಿದ ರೀತಿಯ ಕೃತಜ್ಞತೆಯನ್ನು ಕವಿ ಕಾವ್ಯದಲ್ಲಿ ಚನ್ನಾಗಿ ಚಿತ್ರಿಸಿದ್ದಾನೆ. ಇಲ್ಲಿ ಭರತನ ಅನನ್ಯತೆ ಹೇಗೆ ಭಿನ್ನವಾಗಿದೆ ಎಂಬುವುದುನ್ನು ಗುರುತಿಸಬಹುದು.

ಭರತೇಶ ವೈಭವದಲ್ಲಿ ಭರತನು ಆದರ್ಶ ರಾಜನಾಗಿದ್ದಾನೆ. ಪಂಪ ಮತ್ತು ಚಾವುಂಡಾರಾಯನ ಕಾವ್ಯಗಿಂತ ಇಲ್ಲಿ ಹೇಗೆ ಭಿನ್ನತೆ ಮತ್ತು ಅನನ್ಯತೆಯನ್ನು ಹೊಂದಿದೆ ಎಂಬುವುದನ್ನು ತೌಲನಿಕವಾಗಿ ತಿಳಿಯಬಹುದಾಗಿದೆ. ಭರತನು ಅಯೋಧ್ಯಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದವನು. ಈತ ರಾಜಧರ್ಮವನ್ನು ಸುಂದರವಾಗಿ ನಿರ್ವಹಿಸುತ್ತಿದ್ದನು. ಮುಂಜಾನೆ ಎದ್ದು ಜಿನಪೂಜೆಯನ್ನು ನಿರ್ವಹಿಸುತ್ತಿದ್ದವನು. ನಂತರ ಒಡ್ಡೋಲಗವನ್ನು ಏರ್ಪಡಿಸುತ್ತಿದ್ದನು. ಹೇಗೆಂದರೆ, “ಉದಯಗರಿ ಮೇಲೆ ಮೆರವ ಭಾನುವಿಗೆ ಮತ್ತಿದಿರಾದ ಪ್ರತಿಸೂರ್ಯನಂತೆ ಪದುಳದುತ್ತುಂಗ ಸಿಂಹಾಸನವೇರಿ ದೇಹದ ಕಾಂತಿ ಮೆರೆಯೇ ಮೆರೆದನು” ಎಂದು ಕವಿ ಚಿತ್ರಿಸುತ್ತಾನೆ. ಅಂತಯೇ ಅರಮನೆಯಲ್ಲಿ ಹಲವಾರು ಕವಿ ಪುಂಗವರು ಒಡ್ಡೋಲಗದಲ್ಲಿ ಸಂಪೂರ್ಣವಾಗಿ ಭಾಗವಹಿಸುವಂತೆ ಪ್ರೊತ್ಸಾಹಿಸುತ್ತಿದ್ದನು. ಇವರೊಂದಿಗೆ ಮಡದಿಯರು ಕವಿತೆಗಳನ್ನು ರಚಿಸಿ ಹಾಡುತ್ತಿದ್ದರು ಇಂತಹ ಕವಿಪುಂಗವರಿಗೆ ಮತ್ತು ಗಾಯಕರಿಗೆ ಪ್ರೊತ್ಸಾಹವನ್ನು ನೀಡುತ್ತಿದ್ದನು. ಈ ಒಡ್ಡೋಲಗದ ತರುವಾಯ ಬಹಳ ಮುಖ್ಯವಾಗಿ ಸಭೆಯಲ್ಲಿ ಇದ್ದ ಮುನಿಗಳಿಗೆ ಸತ್ಕಾರಗಳನ್ನು ಮಾಡಿ ಅವರನ್ನು ಸಂತೃಪ್ತಿಗೊಳಿಸುತ್ತಿದ್ದನು. ಇದರೊಂದಿಗೆ ತನ್ನ ಮಡದಿಯರೊಂದಿಗೆ ಜೊತೆಯಲ್ಲಿ ಊಟವನ್ನು ಮಾಡಿ ಅವರೊಡನೆ ನೃತ್ಯ ಸಂಗೀತ ಮತ್ತು ನಾಟಕಾದಿಗಳಲ್ಲಿ ಕಾಲಕಳೆಯುತ್ತಿದ್ದನು. ಜೊತೆಗೆ ಚಕ್ರರತ್ನದ ಸೂಚನೆಯ ಮೇರಗೆ ಯುದ್ಧಮಾಡಲು ಹೊರಡುತ್ತಾನೆ. ಇಲ್ಲಿ ಪಂಪನ ಕಾವ್ಯದಂತೆ ಯುದ್ಧ ಪ್ರಸಂಗವಿರುವುದಿಲ್ಲ. ಭೀಕರತೆ ಮತ್ತು ರೌದ್ರತೆಗೆ ಭರತನ ಯುದ್ಧದಲ್ಲಿ ಅವಕಾಶವಿಲ್ಲ. ಇಲ್ಲಿನ ಯುದ್ಧ ರಕ್ತ ಪಾತದ

ಯುದ್ಧವಾಗಿರುವುದಿಲ್ಲ. ರಾಜಾಧಿರಾಜರು ಮತ್ತು ತಮ್ಮಂದಿರನ್ನು ಮಾತಿನ ಮೂಲಕವೇ ಯುದ್ಧವನ್ನು ಜಯಿಸುತ್ತಾನೆ. ಉದಾಹರಣೆಗೆ ಭರತ ಮತ್ತು ಬಾಹುಬಲಿಯ ಯುದ್ಧದ ಸನ್ನಿವೇಶವನ್ನು ಭರತೇಶವೈಭದಲ್ಲಿ ಗಮನಿಸಬಹುದು. ಹಾಗಾಗಿ ರಕ್ತಪಾತವಿಲ್ಲದೆ ಜಾಣ್ಮೆಯಿಂದ ಭರತನು ಪೂರ್ವ ಸಾಗರದವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಾನೆ. ಇವನಿಗೆ ಭೂಭಾರವನ್ನು ಹೊತ್ತಿರುವೆನೆಂಬ ಚಿಂತೆಯಿಲ್ಲದೆ. ಆಲಸ್ಯ ಇಲ್ಲದೆ ಯಾವುದರ ಮೇಲೂ ಮೋಹವಿಲ್ಲದೆ ವಿಸ್ತಾರವಾದ ರಾಜ್ಯವನ್ನು ಸಂತೋಷದಿಂದ ಆಳ್ವಿಕೆ ಮಾಡುತ್ತಿರುತ್ತಾನೆ. ಇವನಿಗೆ ಯಾವುದೇ ರೀತಿಯ ಅಹಂಗಳು ಇರಲಿಲ್ಲ ಎಂದು ತಿಳಿದು ಬರುತ್ತದೆ.

‘ಪ್ರಜೆ ಪರಿವಾರಕ್ಕೆ ಹಿತನಂತೆ ವೈರಿಭೂ
ಭುಜರಿಗೆ ಭುಜಗೇಂದ್ರನಂತೆ
ನಿಜಗುರುವಿಗೆ ಭೃತ್ಯನಂತೆ ಧಾರ್ಮಿಕರಿಗೆ
ನಿಜಬಂಧುವಾಗಿರಬೇಕು’೬

ಅಂತೆಯೇ ಮುಂದುವರಿದು ರಾಜನಾದವನು ಎಂತಹ ಒಳ್ಳೆಯ ವ್ಯಕ್ತಿತ್ವವನ್ನು ಹೊಂದಿದ್ದನು ಎಂಬುವುದಕ್ಕೆ ಮತ್ತೊಂದು ಪದ್ಯವನ್ನು ಉದಾಹರಣೆಯಾಗಿ ನೋಡಬಹುದು. ರಾಜನಾದವನು ರಾಜನಂತೆ ಇರದೆ ಮುನಿಗಳ ಎದುರಿನಲ್ಲಿ ಜಿನ ಭಕ್ತನಂತೆ ತನ್ನ ವ್ಯಕ್ತಿತ್ವನ್ನು ಬೆಳಸಿಕೊಂಡಿರುತ್ತಾನೆ.

“ರಾಜನ ಮುಂದೆ ಭೃತ್ಯಗೆ ಗುರುವಿನ ಮುಂದೆ
ರಾಜಗೆ ಹಮ್ಮು ಸಲ್ಲೆಂಬ
ರಾಜನೀತಿಯನರಿದಾ ರಾಜ ನಡೆದನು
ರಾಜವಿಡಾಯವ ಬಿಟ್ಟು”೭ ಎಂಬ ಈ ಮಾತುಗಳು ಇಂದಿನ ವರ್ತಮಾನ ಕಾಲಘಟ್ಟದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ರಾಜಕಾರಣಿಯು ಈ ಕಾವ್ಯವನ್ನು ಓದಬೇಕಾಗಿದೆ. ನಮ್ಮನ್ನು ಆಳುವ ಸರ್ಕಾರ ಎಲ್ಲಾ ಹಮ್ಮು ಬಿಮ್ಮುಗಳನ್ನು ಬಿಟ್ಟು ರಾಜ್ಯದ ಒಳತಿಗಾಗಿ ಜನಸಾಮಾನ್ಯರ ಅಭಿವೃದ್ಧಿಗಾಗಿ ಚಿಂತಿಸಬೇಕಾದ ಅನಿವಾರ್ಯತೆ ಇದೆ. ಪ್ರಜೆಗಳೆ ಇಲ್ಲಿ ಪ್ರಭುಗಳಾಗಿದ್ದಾರೆ. ನಮ್ಮನ್ನು ಆಯ್ಕೆ ಮಾಡಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಕಳುಹಿಸುವ ಜನರ ಕಷ್ಟ ಸುಖಗಳಿಗೆ ಸ್ಪಂಧಿಸುವ ಗುಣವನ್ನು ಪ್ರತಿಯೊಬ್ಬ ರಾಜಕಾರಣಿಯು ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಭರತೇಶವೈಭವ ಕಾವ್ಯದಲ್ಲಿ ಭರತನಿಂದ ಸುಖಿ ರಾಜ್ಯದ ಪರಿಕಲ್ಪನೆ ಮೂಡಿದೆ ಎಂದು ಹೇಳಬಹುದು.

ಮಾತಿನಲ್ಲಿ ಮೃದು ಸ್ವಭಾವದವನಾದ ಭರತನು ಚಕ್ರರತ್ನ ಕಾರಣದಿಂದ ರಾಜ್ಯ ವಿಸ್ತಾರಕ್ಕೆ ತೆರಳಿದಾಗ ಪೂರ್ವ ಸಾಗರ ಮತ್ತು ಇತರೆ ರಾಜರು ಕಪ್ಪಕಾಣಿಕೆಗಳನ್ನು ತಂದು ಭರತನ ಚಕ್ರಿಯ ಅಧಿಪತ್ಯವನ್ನು ಒಪ್ಪಿಕೊಂಡರು. ಆದರೆ ಸಮುದ್ರ ಮಧ್ಯದ ದ್ವೀಪವಾಸಿಯಾದ ಮಾಗಧನೆಂಬ ವ್ಯಂತರ ರಾಜ ಒಪ್ಪಿಕೊಳ್ಳಲಿಲ್ಲ. ಆಗ ಭರತನು "ಮಾಗಧ ನನಗೊಬ್ಬ ಪಗೆಯೇ? ಸೂರ್ಯನಿಗೆ ದೊಡ್ಡ ಗೂಗೆಯ ಯೋಚನೆಯೇಕೆ?" ಎಂದು ಕೊಂಡು ಭರತರಾಜ ತನ್ನ ರಥವನ್ನು ಏರಿ ಸಾಗರದ ಮೇಲೆ ನಡೆದ. ಅಲ್ಲಿಂದಲೆ ಮಾಗಧನಿಗೆ ಅನುಸಂಧಾನ ಮಾಡಲು ಬಿಲ್ಲಿನಲ್ಲಿ ಬಾಣವೊಂದನ್ನು ಪ್ರಯೋಗಿಸಿದ. ಅದು ನೇರವಾಗಿ ಹಾರಿ ಹೋಗಿ ಮಾಗಧನ ಓಲಗ ಶಾಲೆಯಲ್ಲಿದ್ದ ಕಂಬಕ್ಕೆ ಬರಸಿಡಿಲ ಆರ್ಭಟದಿಂದ ಬಡಿದು ನೆಟ್ಟಿಕೊಂಡಿತು. ಬಲ್ಲಿದನಾದ ಮಾಗಧ ಆ ಬಾಣವನ್ನು ತರಿಸಿ ಅದರ ಹಿಳುಕಿನೋಲೆಯನ್ನು ಕರಣಿಕನ ಕೈಯಲ್ಲಿ ಓದಿಸಿದ. ಅದರಲ್ಲಿ ಭರತನ ಪೌರುಷನವನು ಕುರಿತಂತೆ ಒಂದು ಧೀರ ತನದ ಓಲೆಯನ್ನು ಕಳುಹಿಸಿದ. ಭರತನು ಎಷ್ಟು ಮೃದು ಸ್ವಭಾವಿಯೋ ಅಷ್ಟೇ ಪರಾಕ್ರಮಿಯು ಎಂಬುವುದು ಈ ಪ್ರಸಂಗದಿಂದ ತಿಳಿದುಬರುತ್ತದೆ. "ಶ್ರೀಮನ್ಮಹಾ ಪುರುಜಿನೇಂದ್ರನ ಸುಕುಮಾರನೂ, ಗುರು ಹಂಸನಾಥನ ಭಾವಕ್ಕೆ ಸೊಕ್ಕಿದ ಅರಿರಾಯರೆಂಬ ಗಿರಿಗಳಿಗೆ ವಜ್ರದಂಡಪ್ರಾಯನೂ ಆದ ಪ್ರಚಂಡ ಭರತ ಚಕ್ರೇಶ್ವರನು ನಮ್ಮ ಕಿಂಕರ ಮಾಗಧನಿಗೆ ಕೊಟ್ಟ ನಿರೂಪ: ನಾಳೆ ಬಂದು ನೀನು ನಮ್ಮನ್ನು ಕಾಣತಕ್ಕದ್ದು. ಇದು ಪರಮಶಾಸನ"೮. ಎಂದು ಹೇಳುತ್ತಾನೆ.

ಭರತನ ಮಾತಿಗೆ ಮಾಗಧನು ಸಿಡುಮಿಡಿಗೊಂಡು ಹೌಹಾರುತ್ತಾನೆ. ಆದರೆ ಮಂತ್ರಿಗಳು ಮಾಗಧನಿಗೆ ಬುದ್ಧಿಯನ್ನು ಹೇಳುತ್ತಾರೆ. "ಭರತಚಕ್ರೇಶ್ವರ ಅಸಾಮಾನ್ಯ, ದೇವರ ದೇವನ ಅತ್ಮಜ, ಅದ್ಭುತ ಸಂಪತ್ತಿಗೆ ಅಧಿಪತಿ; ಕಿಂಚಿತ್ತೂ ಭಯವಿಲ್ಲದ ನಿಶ್ಯಂಕ, ಚರಮಾಂಗ. ಆದುದರಿಂದ ಕಾಳಗ ಒಳ್ಳೆಯದಲ್ಲ. ಸಮಾನನೊಡನೆ ಯುದ್ಧಮಾಡುವುದು ಸರಿಯೇ ಹೊರತು ಅಧಿಕನೊಡನೆ ಹೋರಾಡುವುದು ತನ್ನನ್ನು ತಾನೇ ಇಂದುಕೊಂಡಂತೆ"೯. ಎಂದು ಹೇಳುತ್ತಾರೆ. ಮರು ದಿನವೇ ಮಾಗಧನು ಕಪ್ಪಕಾಣಿಕೆಗಳನ್ನು ತಂದು ಭರತನಲ್ಲಿ ಒಪ್ಪಿಸಿ ಸಾಮಂತನಾಗುತ್ತಾನೆ. ಈ ಹಿನ್ನೆಲೆಯನ್ನು ಗಮನಿಸಿದ್ದಾಗ. ಭರತನ ಯುದ್ಧದ ಅನನ್ಯತೆಯು ಉಳಿದ ಸಂದರ್ಭಕ್ಕಿಂತ ಭಿನ್ನವಾಗಿ ಕಂಡುಬರುತ್ತದೆ. ಆದರೆ ತನ್ನ ತಮ್ಮನಾದ ಬಾಹುಬಲಿಯು ಯುದ್ಧದ ಸಂದರ್ಭದಲ್ಲಿ ಬೇರೆಯದೆ ಆದ ಸಂದರ್ಭವನ್ನು ರತ್ನಾಕರವರ್ಣಿಯು ಕಟ್ಟಿಕೊಡುತ್ತಾನೆ. ಇಲ್ಲಿ ದಾಯಾದಿ ಮತ್ಸರವನ್ನು ಉಂಟುಮಾಡಲು ಇಷ್ಟಪಡುವುದಿಲ್ಲ ಎಂಬುವುದು ತಿಳಿದು ಬರುತ್ತದೆ. ಇದಕ್ಕಿಂತ ಭಿನ್ನವಾಗಿ ಭರತನು ಹಲವು ಕಡೇ ಯುದ್ಧಕ್ಕೆ ಹೋದಾಗ ಸಂಬಂಧಗಳಿಗೆ ಮೌಲ್ಯಯುತವಾದ

ಗೌರವ ಮತ್ತು ಬೆಲೆಯನ್ನು ನೀಡುತ್ತಾನೆ. ಸಿಂಧುದೇವಿ ಮತ್ತು ಗಂಗಾದೇವಿಯರಿಗೆ ಸೋದರ ವಾತ್ಸಲ್ಯದ ಪ್ರೀತಿಯನ್ನು ನೀಡುತ್ತಾನೆ.

ಭರತ ಯುದ್ಧದಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುತ್ತಾನೆ. ನಂತರ ಕೊನೆಯಾದಾಗಿ ಭರತನ ಚಕ್ರರತ್ನವು ಬಾಹುಬಲಿಯ ಪೌದನಪುರದ ಬಳಿ ನಿಂತು ಬಿಡುತ್ತದೆ. ಇಲ್ಲಿ ಭರತನ ಸೋದರವಾತ್ಸಲ್ಯತೆ ಇಲ್ಲಿ ಅಭಿವ್ಯಕ್ತವಾಗುತ್ತದೆ. ಜೊತೆಗೆ ಭರತ ಮತ್ತು ಬಾಹುಬಲಿಯ ಸಂಬಂಧದ ಅನನ್ಯತೆ ಗೋಚರವಾಗುತ್ತದೆ. ಈ ಬಗೆಯ ವಿಭಿನ್ನತೆಯನ್ನು ಬಾಹುಬಲಿಯ ಚಿತ್ರಣದಲ್ಲಿ ಚರ್ಚಿಸಲಾಗುವುದು. ಭರತೇಶ ವೈಭವದಲ್ಲಿ ಭರತನಿಗೆ ಸಮನಾಗಿ ಬಾಹುಬಲಿಯನ್ನು ರತ್ನಾಕರವರ್ಣಿ ಚಿತ್ರಿಸಿಲ್ಲವಾದರೂ ಇಲ್ಲಿ ಬಾಹುಬಲಿ ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ಇಲ್ಲಿ ಭರತನಷ್ಟೇ ಬಾಹುಬಲಿಯು ವೀರ ಧೀರ ಮತ್ತು ಸಮರ್ಥ ರಾಜನಾಗಿದ್ದಾನೆ.  ಇಂತಹ ಸಂದರ್ಭದಲ್ಲಿ ಭರತನ ಮಂತ್ರಿಯಾದ ದಕ್ಷಿಣಾಂಕನು ಬಾಹುಬಲಿಯ ಹತ್ತಿರ ಹೋಗಿ ಯುದ್ಧಬೇಡ ಎಂದು ವಿನಂತಿ ಮಾಡಿಕೊಂಡರು ಸಹ ಬಾಹುಬಲಿ ಒಪ್ಪುವುದಿಲ್ಲ. ನಾನು ಯುದ್ಧ ಮಾಡುಲು ಸಿದ್ಧನಿದ್ದೇನೆಂದು ಹೇಳಿ ಕಳಿಹಿಸುತ್ತಾನೆ. ಆದರೆ ಬಾಹುಬಲಿಯ ಮಂತ್ರಿಯ ಮಾತಿನಿಂದ ಇವನ ಮನಸ್ಸು ಬದಲಾವಣೆಯನ್ನು ಬಯಸುತ್ತದೆ ಎಂಬುವುದು ಕಾವ್ಯದಿಂದ ತಿಳಿದು ಬರುತ್ತದೆ. ಇಲ್ಲಿ ಪ್ರಣಯ ಚಂದ್ರಮನ ಮಾತು ಬಹಳ ಅರ್ಥಪೂರ್ಣವಾಗಿ ಕಂಡುಬರುತ್ತದೆ. 'ಗುರುವಿಗೆ ಶಿಷ್ಯ ತಂದೆಗೆ ಮಗ ತನ್ನಯ ಪುರುಷರಿಗೆ ಎರಗೆದಿರೆ ಹಿರಿಯಣ್ಣಗೆ ಅನುಜ ಎರಗದಾಗ ಮಳೆ ಬೆಳೆ ಧರೆಯೊಳುಂಟೆ ಸ್ವಾಮಿ... ಸ್ವಾಮಿ..'೧೦ ಎಂದನು. ಈ ಮಾತುಗಳನ್ನು ಬಾಹುಬಲಿಯು ಕೇಳಿಸಿಕೊಂಡರೂ ಸಹ ಕೊನೆಗೆ ಭರತನು ತನ್ನ ತಮ್ಮನ ಬಳಿ ಮಾತನಾಡಲು ಇಷ್ಟ ಪಡುತ್ತೇನೆ. ಇದರೊಂದಿಗೆ ರತ್ನಾಕರವರ್ಣಿ ಭರತನ ಬಾಯಿಂದ ನಯವಾದ ಮಾತುಗಳನ್ನು ಹಾಡಿ ಬಾಹುಬಲಿಯನ್ನು ಒಲಿಸಿಕೊಳ್ಳಲು ತುಂಬಾ ಪ್ರಯತ್ನಪಡುತ್ತಾನೆ. "ನಿನಗಾನು ಪಗೆಯ ನೀನೆನಗೆ ಪಗೆಯೇ ಪೇಳು ಜಿನಪುತ್ರರಿದನು ನಾವಿಂದು ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹ ಶಾಸನವ ಬರೆದು ಕೊಟ್ಟವಲ್ತೆ"ಎಂದು ಭರತನು ಸೌಮ್ಯದ ಮಾತುಗಳನ್ನು ಹಾಡುತ್ತಾನೆ. ಜಲಯುದ್ಧ, ದೃಷ್ಟಿಯುದ್ಧ ಮಲ್ಲಯುದ್ಧಗಳಲ್ಲಿ ನಾನು ಸೋತಿದ್ದೇನೆ. ಏಕೆಂದರೆ ನನಗಿಂತ ನೀನು ಎತ್ತರದಲ್ಲಿ ಇರುವವನು. ನಿನ್ನ ಶಕ್ತಿ ಮತ್ತು ಪರಾಕ್ರಮದ ಬಗ್ಗೆ ನನಗೆ ಅರಿವಿದೆ ಎಂದು ಹೇಳುತ್ತಾನೆ. ಇಂತಹ ಮಾತುಗಳನ್ನು ಕೇಳಿಸಿಕೊಂಡ ಬಾಹುಬಲಿಯು ತನ್ನ ಎಲ್ಲಾ ರಾಜ್ಯ ಮತ್ತು ಸರ್ವಸ್ವವನ್ನು ಭರತನಿಗೆ ಒಪ್ಪಿಸಿ ಬಾಹುಬಲಿ ತಪ್ಪಸ್ಸಿಗೆ ಹೊರಡುತ್ತಾನೆ. ಆದರೆ ಬಾಹುಬಲಿ ಒಂದು ವರ್ಷ ತಪ್ಪಸ್ಸು ಮಾಡಿದರೂ ಸಹ ಅವನಿಗೆ ದೀಕ್ಷೆ ದೊರೆಯುವುದಿಲ್ಲ. ಏಕೆಂದರೆ ಬಾಹುಬಲಿಗೆ ನಾನು ಅಣ್ಣನ ಜಾಗದಲ್ಲಿ ಇದ್ದೇನೆ ಎಂಬ ಪಾಪಪ್ರಜ್ಞೆಯು ಕಾಡುತ್ತಿರುತ್ತದೆ. ಈ ಬಗೆಯ ಸನ್ನಿವೇಶ ಪಂಪನಲ್ಲಿ ಕಂಡುಬರುವುದಿಲ್ಲ. ಆದರೆ ರತ್ನಾಕರವರ್ಣಿ ಈ

ಸನ್ನಿವೇಶವನ್ನು ಬಹಳ ವಿಭಿನ್ನ ಮತ್ತು ಅನನ್ಯತೆಯಿಂದ ಕಟ್ಟಿದ್ದಾನೆ. ಅಂತಿಮವಾಗಿ ಬಾಹುಬಲಿಯ ಸ್ಥಿತಿಯನ್ನು ಕಂಡ ಭರತನು ತನ್ನ ತಂದೆಯ ಮಾತಿನಂತೆ ಬಾಹುಬಲಿಯ ಹತ್ತಿರ ಹೋಗಿ ಆತನ ಮನಸ್ಸಿನಲ್ಲಿ ಇದ್ದ ಭಾವನೆಯನ್ನು ಹೋಗಲಾಡಿಸಿ ತಪ್ಪಸ್ಸಿನಲ್ಲಿ ಸಿದ್ಧಿಯನ್ನು ಕರುಣಿಸುತ್ತಾನೆ. ಇಂತಹ ಹಲವಾರು ಸನ್ನಿವೇಶಗಳು ಭರತ ಮತ್ತು ಬಾಹುಬಲಿಯಲ್ಲಿನ ಅನನ್ಯತೆಯನ್ನು ತಿಳಿಸುತ್ತಾ ಹೋಗುತ್ತದೆ.

ಒಟ್ಟಾರೆಯಾಗಿ ರತ್ನಾಕರವರ್ಣಿಯು ಭರತೇಶ ವೈಭವದಲ್ಲಿ ಭರತ ಮತ್ತು ಬಾಹುಬಲಿಯ ಚಿತ್ರಣವನ್ನು ಹಿಂದಿನ ಎಲ್ಲಾ ಕಾವ್ಯಗಳಿಗಿಂತ ವಿಭಿನ್ನವಾಗಿ ಚಿತ್ರಿಸಿದ್ದಾನೆ. ಹತ್ತು ಸಾವಿರ ಸಾಂಗತ್ಯ ಪದ್ಯಗಳಲ್ಲಿ ಭರತನ ಮತ್ತು ಬಾಹುಬಲಿಯ ಅನನ್ಯತೆಯನ್ನು ರತ್ನಾಕರವರ್ಣಿಯು ತನ್ನ ಭರತೇಶಕಾವ್ಯದಲ್ಲಿ ಭಿನ್ನವಾಗಿ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಕುವೆಂಪು ಹೇಳುವಂತೆ 'ಭರತೇಶ ವೈಭವ ಕಾವ್ಯವು ಒಂದೋಳ್ಳೆ ಮಹಾಕಾವ್ಯವಾಗಿದೆ. ಎಂದು ಗುರುತಿಸಿ ಪ್ರಶಂಸಿಸಿದ್ದಾರೆ. ಈ ಭರತೇಶ ವೈಭವ ಕಾವ್ಯವು ವರ್ತಮಾನದ ಹಲವು ಸಂಗತಿಗಳಿಗೆ ಮುಖಾಮುಖಿಯಾಗುತ್ತದೆ ಎಂಬುವುದನ್ನು ಓದುಗರು ಎಂದೆದಿಗೂ ಮರೆಯುವಂತಿಲ್ಲ. ಈ ಕಾರಣದಿಂದ ಇಂದಿಗೂ ಭರತೇಶ ವೈಭವ ಕೃತಿಯು ಎಲ್ಲರ ಮನ ಮನೆಗಳಲ್ಲಿ ಹಾಡುಗಬ್ಬವಾಗಿ ಪ್ರಮುಖ ಸ್ಥಾನ ಪಡೆದುಕೊಂಡಿದೆ.

ಅಡಿಟಿಪ್ಪಣಿ


೧. ಅಮರೇಶ ನುಗಡೋಣಿ(ಸಂ), ಭರತೇಶ ವೈಭವ ಸಾಂಸ್ಕೃತಿಕ ಮುಖಾಮುಖಿ, ಪು.ಸಂ.೧೬

೨. ತ.ಸು. ಶಾಮರಾಮ (ಸಂ), ಭರತೇಶ ವೈಭವ ಸಂಗ್ರಹ, ಪು.ಸಂ.೯

೩. ಹೆಚ್.ಸಿದ್ಧಲಿಂಗಯ್ಯ, ಭರತೇಶವೈಭವ ಸಂಗ್ರಹ, ಪು.ಸ. ೩೭

೪. ತ.ಸು. ಶಾಮರಾಮ (ಸಂ), ಭರತೇಶ ವೈಭವ ಸಂಗ್ರಹ, ಪು.ಸಂ.೪೮

೫. ಅದೇ ಪು.ಸಂ.೩೦

೬. ಅದೇ ಪು.ಸಂ.೨೭

೭. ಅದೇ ಪು.ಸಂ.೫೩

೮. ಡಾ.ಎಸ್.ವಿ.ಸುಜಾತ, ರತ್ನಾಕರವರ್ಣಿ ಮತ್ತು ಅವನ ಕೃತಿಗಳು, ಪುಟ.೪೨

೯. ವಿವಿಧ ಲೇಖಕರು, ರತ್ನಾಕರವರ್ಣಿ- ಕವಿ ಕಾವ್ಯವಿಚಾರ, ವಿಚಾರ ಸಂಕಿರಣ ಪು.ಸಂ.೫೬

೧೦. ತ.ಸು. ಶಾಮರಾಮ (ಸಂ), ಭರತೇಶ ವೈಭವ ಸಂಗ್ರಹ, ಪು.ಸಂ.೪೬

ಪರಾಮರ್ಶನ ಗ್ರಂಥಗಳು

೧. ಅಮರೇಶ ನುಗುಡೋಣಿ (ಸಂ), ಭರತೇಶ ವೈಭವದ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩

೨. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ, ೨೦೧೩

೩. ತ.ಸು.ಶಾಮರಾಯ(ಸಂ), ಭರತೇಶ ವೈಭವ ಸಂಗ್ರಹ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ಮರು ಮುದ್ರಣ, ೨೦೧೯

೪. ವಿವಿಧ ಲೇಖಕರು, ರತ್ನಾಕರವರ್ಣಿ: ಕವಿ-ಕಾವ್ಯ-ವಿಚಾರ, ವಿಚಾರ ಸಂಕಿರಣ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೦

೫. ಪ್ರೊ.ಬಿ.ವ್ಹಿ ಗುಂಜೆಟ್ಟಿ, ಭರತೇಶನ ಭೋಗವೈಭವ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ,೧೯೭೮

೬. ಪ್ರೊ.ಹೆಚ್.ಸಿದ್ಧಲಿಂಗಯ್ಯ, ಭರತೇಶವೈಭವ ಸಂಗ್ರಹ, ಮಾನಸ ಬುಕ್ ಹೌಸ್, ಮೈಸೂರು, ೨೦೧೮

೭. ಹೇಮಲತಾ ಪದಕಿ, ಕವಿ ರತ್ನಾಕರವರ್ಣಿ, ಸಮಾಜ ಪ್ರಕಾಶಾಲಯ, ಧಾರವಾಡ,೧೯೭೪